ಈ ದಿನ ದಿನಾಂಕಃ 29.07.2026 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>**ಪಾಟೀಸವಾಲು ವಾದಿ ಪರ ಶ್ರೀ ಹೆಚ್ ಎಂ ವಿ ವಕೀಲರಿಂದಃ**</u>

ಈ ದಾವೆಯನ್ನು ಯಾವ ಆಸ್ತಿಗೆ ಸಂಬಂದಿಸಿದಂತೆ ದಾಖಲು ಮಾಡಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಯು ಪ್ರಸ್ತುತ ವಾದಿಯ ಹೆಸರಿಗೆ ಖಾತೆ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ಯು ಮೂಲತಃ ಸೈಟ್ ನಂ. 46ರ ಒಂದು ಭಾಗ ಎಂದರೆ ಸರಿ. ಸೈಟ್ ನಂ. 45 ಮತ್ತು 46 ನಮ್ಮ ಕುಟುಂಬಕ್ಕೆ ಮಂಜೂರಾದ ಸ್ವತ್ತುಗಳು ಎಂದರೆ ಸರಿ. ಸಾಕ್ಷಿಯು ಮುಂದುರೆದು ವಾದಿ ಮತ್ತು ದೇವೆಂದ್ರಪ್ಪ ಇಬ್ಬರಿಗೂ ಸೇರಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಮಂಜೂರಾದ ಸೈಟ್ ನ ವಿಸ್ತೀರ್ಣ 40x60 ಎಂದರೆ ಸರಿ. 1983 ರಲ್ಲಿ ಮಂಜೂರಾದಾಗಿನಿಂದಲೂ ಸದರಿ ಸೈಟನ್ನು ನಾವು ಒಟ್ಟು ಕುಟುಂಬದಲ್ಲಿ ಅನುಭವಿಸಿಕೊಂಡು ಬಂದಿರುತ್ತೇವೆ ಎಂದರೆ ಸರಿ. ಸೈಟ್ ನಂ. 45, ಸೈಟ್ ನಂ. 46ರ ಪೂರ್ವ ದಿಕ್ಕಿಗೆ ಬರುತ್ತದೆಂದರೆ ಸರಿ. ಸೈಟ್ ನಂ.45 ಮತ್ತು 46 ರಲ್ಲಿ ವಾದಿಯ ಹಿಸ್ಸೆಗೆ ಸೈಟ್ ನಂ. 46 ರಲ್ಲಿ ಅರ್ಧ ಬಾಗವನ್ನು 2014 ರಲ್ಲಿ ವಿಬಾಗ ಪತ್ರದಂತೆ ನೀಡಿರುತ್ತೇವೆ ಎಂದರೆ 4 ½ ಮೀ. ಇಬ್ಬರಿಗೂ ನೀಡಿದ್ದು ಅದರಲ್ಲಿ ಅವರು 6 ½ ಮೀ ಎಂದು ಮಾಡಿಸಿಕೊಂಡಿರುತ್ತಾರೆ.

ಈ ಹಂತದಲ್ಲಿ ಪ್ರಕರಣವು ರಾಜಿಗೆ ಸೂಕ್ತವೆನಿಸಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.